**ಸಿಡಿಲು, ಭೂಕಂಪ, ಬೆಂಕಿಯ ಹೊಡೆತಗಳನ್ನೆಲ್ಲ ಎದುರಿಸಿದ ಕುತುಬ್ ಮಿನಾರ್, ಈಗಲೂ ಸುಂದರ ಇಮಾರತ್.**

ಚಿತ್ರ-ಲೇಖನ:
**ಜಿ.ಆರ್.ಪಂಡಿತ, ಸಾಗರ**



**ಕು**ತುಬ್ ಮಿನಾರ್, ಯುನೆಸ್ಕೋ ಗುರುತಿಸಿದ ಜಾಗತಿಕ ಪರಂಪರೆಯ ಸ್ಥಳ. ದೆಹಲಿಯ ಮೆಹರೌಲಿ ಪ್ರದೇಶದಲ್ಲಿ ತಲೆ ಎತ್ತಿ ಶತಮಾನಗಳೇ ಕಳೆದಿವೆ. 240 ಅಡಿಗಳಷ್ಟು ಎತ್ತರವಿರುವ ಈ ಮಿನಾರ್ 6 ಮಹಡಿ-ಗಳನ್ನು ಹೊಂದಿದೆ. ತಳಭಾಗದಲ್ಲಿ 47 ಚದರಡಿ ಅಗಲ ಹೊಂದಿರುವ ಕಟ್ಟಡ ಮೇಲೆ ಹೋದಂತೆ ಕಡಿಮೆ-ಯಾಗುತ್ತಾ ತುದಿಯು 9 ಚದರಡಿ ಸ್ಥಳಾವಕಾಶ ಹೊಂದಿದೆ. ವೃತ್ತಾಕಾರದ ಇದರಲ್ಲಿ 379 ಮೆಟ್ಟಿಲುಗಳಿವೆ.

1192 ರಲ್ಲಿ, ದೆಹಲಿಯ ಮೊದಲ ಸುಲ್ತಾನ ಕುತುಬುದ್ದೀನ್ ಐಬಕ್ ಈ ಕಟ್ಟಡವನ್ನು ಭಾರತದಲ್ಲಿ ಮುಸ್ಲಿಂ ದೊರೆಗಳ ಆಡಳಿತ ಆರಂಭವಾದುದರ ದ್ಯೋತಕವಾಗಿ ಕಟ್ಟಿದನೆಂದು ಕೆಲವು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಪಶ್ಚಿಮ ಅಫಘಾನಿಸ್ತಾನದ 'ಮಿನಾರೆಟ್ ಆಫ್ ಜಾಮ್'ನ ಮಾದರಿಯಲ್ಲಿ ಈ ಕಟ್ಟಡವನ್ನು ಕಟ್ಟಲಾಗಿದೆ. ಕುತುಬುದ್ದೀನ್ ಐಬಕ್ ತನ್ನ ಕಾಲಾವಧಿಯಲ್ಲಿ ಕೇವಲ ಒಂದು ಮಹಡಿಯವರೆಗೆ ಮಾತ್ರ ಕಟ್ಟಿದ್ದ. ನಂತರ ಬಂದ ಇಲ್ತಮಷ್ 1220ರಲ್ಲಿ ಅದಕ್ಕೆ ಮೂರು ಮಹಡಿಗಳನ್ನು ಸೇರಿಸಿದ.

1369ರಲ್ಲಿ ಸಿಡಿಲಿನ ಹೊಡೆತಕ್ಕೆ ನಲುಗಿ ಮೇಲ್ಮಹಡಿ ಕುಸಿದಾಗ ಫಿರೋಜ್ ಷಾ ತುಘಲಕ್ ಅದನ್ನು ರಿಪೇರಿಗೊಳಿಸಿದ್ದಲ್ಲದೆ, ಇನ್ನೊಂದು ಮಹಡಿ ವಿಸ್ತರಿಸಿದ. ಆದರೆ 1505ರಲ್ಲಿ ಭೂಕಂಪಕ್ಕೆ ತುತ್ತಾಗಿ ಮತ್ತೆ ಹಾನಿಗೊಳಗಾಯಿತು. ಆಗಿನ ದೊರೆ ಸಿಕಂದರ್ ಲೋಧಿ ರಿಪೇರಿಗೊಳಪಡಿಸಿದ. 1803 ರಲ್ಲಿ ಮಗುದೊಮ್ಮೆ ಭೂಕಂಪದಿಂದಾಗಿ ಈ ಕಟ್ಟಡ ತೀವ್ರ ಹಾನಿಗೊಳಗಾಯಿತು. ಬ್ರಿಟಿಷ್ ಇಂಡಿಯಾದ ಆರ್ಮಿ ಮೇಜರ್ ರಾಬರ್ಟ್ ಸ್ಮಿತ್ 1828 ರಲ್ಲಿ ಪುನರ್ನವೀಕರಣಗೊಳಿಸಿದ ಎಂದು ಇತಿಹಾಸ ಹೇಳುತ್ತದೆ.

ಕುತುಬ್ ಮಿನಾರಿನ ಮೂರು ಮಹಡಿಗಳು ಕೆಂಪು ಕಲ್ಲಿನಿಂದ ನಿರ್ಮಾಣಗೊಂಡಿದ್ದು, ಕೊನೆಯ ಎರಡು ಮಹಡಿಗಳಿಗೆ ಮಾರ್ಬಲ್ ಬಳಸಲಾಗಿದೆ. ಮೊದಲ ಮಹಡಿಯನ್ನು ಖುವ್ವತುಲ್ ಇಸ್ಲಾಂ ಮಸೀದಿಯಾಗಿ ಬಳಸಲಾಗಿದೆ. ಇದೇ ಭಾರತದ ಮೊದಲ ಮಸೀದಿ ಎನ್ನಲಾಗುತ್ತದೆ. ಈ ಮಸೀದಿಯ ಪೂರ್ವ ಪ್ರವೇಶದ್ವಾರ-ದಲ್ಲಿ ಪರ್ಷಿಯನ್ ಭಾಷೆಯಲ್ಲಿ ಬರೆದ ಬರಹವೊಂದಿದೆ.

ಮೊದಲು ಈ ಮಿನಾರನ ಒಳಭಾಗವನ್ನು ನೋಡುವ ಅವಕಾಶವಿತ್ತು. ಕೊನೆಯ ಮಹಡಿಯವರೆಗೆ ಹೋಗಿಬರಬಹುದಿತ್ತು. ಆದರೆ 1981ರಲ್ಲಿ, ವಿದ್ಯುತ್ ಅಪಘಾತ ಹಾಗೂ ನಂತರದಲ್ಲಿ ಉಂಟಾದ ಕಾಲ್ತುಳಿತಕ್ಕೆ ಸಿಕ್ಕಿ 45 ಜನ ಮೃತಪಟ್ಟರಲ್ಲದೇ ಹಲವಾರು ಜನ ಗಾಯಗೊಂಡರು. ಪ್ರತಿ ಶುಕ್ರವಾರ ಮಕ್ಕಳಿಗೆ ಉಚಿತ ಪ್ರವೇಶ ಕಲ್ಪಿಸಲಾಗಿತ್ತಾದ್ದರಿಂದ ಆಗ ಈ ದುರಂತದಲ್ಲಿ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಮರಣವನ್ನಪ್ಪಿದರು. ಈ ಘಟನೆಯ ನಂತರದಲ್ಲಿ ಕುತುಬ್ ಮಿನಾರ್ ಒಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ಕುತುಬ್ ಮಿನಾರ್ ಸುತ್ತಮುತ್ತ ಅನೇಕ ಐತಿಹಾಸಿಕ ಕಟ್ಟಡಗಳ ಸಮುಚ್ಚಯವೇ ಇದೆ. ಖುವ್ವತುಲ್ ಇಸ್ಲಾಂ ಮಸೀದಿ, ದೆಹಲಿಯ ಕಬ್ಬಿಣದ ಸ್ತಂಭ, ಇಮಾಮ್ ಜಾಮಿನ್ ಸಮಾಧಿ, ಇಲ್ತುಮಷ್ ಹಾಗೂ ಮೇಜರ್ ಸ್ಮಿತ್ ಸಮಾಧಿ– ಹೀಗೆ ಅನೇಕ ಕಟ್ಟಡಗಳು ಪ್ರವಾಸಿಗರನ್ನು ಆಕರ್ಷಿಸುತ್ತದೆ. ಕೆಲವು ಕಟ್ಟಡಗಳು ಶಿಥಿಲಗೊಂಡಿದ್ದು ಗೋಡೆಗಳು ನೆಲಕಚ್ಚುತ್ತಿವೆ. ಪ್ರಾಚ್ಯವಸ್ತು ಇಲಾಖೆ ಈ ಕಡೆ ಗಮನ ಕೊಡುವುದು ಒಳಿತು.

**ದೆಹಲಿ ದರ್ಶನ:** ದೆಹಲಿಯ ಕನ್ನಾಟ್ ಪ್ಲೇಸ್‌ನ ಸಿಂಧಿಯಾ ಹೌಸ್‌ನಿಂದ ಹವಾನಿಯಂತ್ರಿತ ಬಸ್‌ನಲ್ಲಿ ಕೇವಲ ಇನ್ನೂರು ರೂಪಾಯಿಯಲ್ಲಿ ದೆಹಲಿ ವೀಕ್ಷಿಸಲು ಪ್ರವಾಸೋದ್ಯಮ ಇಲಾಖೆ ವ್ಯವಸ್ಥೆ ಮಾಡಿದೆ. ಕುತುಬ್ ಮಿನಾರ್, ಕೆಂಪುಕೋಟೆ, ಬಿರ್ಲಾ ಮಂದಿರ, ಲೋಟಸ್ ಮಹಲ್, ಅಕ್ಷರಧಾಮ, ಹುಮಾಯೂನ್ ಸಮಾಧಿ, ರಾಜಘಾಟ್, ಇಂಡಿಯಾ ಗೇಟ್, ರಾಷ್ಟ್ರಪತಿ ಭವನ, ಸಂಸತ್ ಭವನ ವೀಕ್ಷಿಸಬಹುದು.

